# ಮಾದರಿ ಪ್ರಶ್ನಾ ಪತ್ರಿಕೆ 2- ಸಮಾಜ ವಿಜ್ಞಾನ 10 ನೇ ತರಗತಿ

ಅ. ಪರ್ಯಾಯ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಸೂಕ್ತವಾದುದನ್ನು ಆರಿಸಿ ಬರೆಯಿರಿ.1*10=10

1.ಸರ್ವೋಚ್ಛ ನ್ಯಾಯಾಲಯವು ಸ್ಥಾಪನೆಗೆ ಜಾರಿಗೆ ಬಂದ ಶಾಸನ_______

1) 1784 ರ ಪಿಟ್ಸ್ ಇಂಡಿಯಾ ಆಕ್ಟ್ 2)1773 ರ ರೆಗ್ಯುಲೇಟಿಂಗ್ ಆ್ಯಕ್ಟ್ 3)1935 ರಭಾರತ ಸರ್ಕಾರದ ಕಾಯಿದೆ. 4)1909ರ ಮಿಂಟೋ ಮಾರ್ಲೆ ಸುಧಾರಣೆ

2)ರಾಜ್ಯ ಪುನರ್ ವಿಂಗಡಣಾ ಆಯೋಗದ ಅಧ್ಯಕ್ಷರು ___________

1)ವಲ್ಲಭಾಬಾಯಿ ಪಟೇಲ್ 2)ಫಝಲ್ ಆಲಿ 3)ಕೆ.ಎಂ . ಪಣಿಕ್ಕರ್ 4)ಹೆಚ್.ಎನ್ .ಕುಂಜ್ರು

3.ಭಾರತಕ್ಕೆ ಅನ್ಯ ರಾಷ್ಟ್ರ ದೊಂದಿಗೆ ಉತ್ತಮ ಸಂಬಂದ ಹೊಂದಲು ಈ ಕೆಳಗಿನ ಒಂದು ಅಂಶವು ಅನಿವಾರ್ಯವಾಗಿದೆ._______

1)ರಾಷ್ಟ್ರೀಯ ಹಿತಾಸಕ್ತಿ 2)ಶಸ್ತ್ರಾಸ್ತ್ರ ಸಂಗ್ರಹಿಸುವುದು.
3)ಪ್ರತಿಷ್ಟೆ 4)ವಿಶ್ವ ನಾಯಕತ್ವ ಗಳಿಸುವುದು.

4."ಎ" ಪಟ್ಟಿಯ ಸಂಸ್ಥೆಗಳು "ಬಿ" ಪಟ್ಟಿಯಲ್ಲಿ ಅದರ ಕೇಂದ್ರ ಕಛೇರಿಗಳು ಇವೆ. ಇವುಗಳ ಸರಿ ಹೊಂದುವ ಗುಂಪು

| | |
|---|---|
| 1)ವಿಶ್ವ ಸಂಸ್ಥೆ | ಎ)ಪ್ಯಾರಿಸ್ |
| 2)ಯುನೆಸ್ಕೋ | ಬಿ)ಜಿನಿವಾ |
| 3) ಐ.ಎಮ್.ಎಫ್ | ಸಿ)ವಾಷಿಂಗ್ ಟನ್ |
| 4) ವಿಶ್ವ ಆರೋಗ್ಯ ಸಂಸ್ಥೆ | ಡಿ)ನ್ಯೂಯಾರ್ಕ್ |

ಉತ್ತರಗಳು:

1) 1-ಎ,2-ಬಿ,3-ಸಿ,4-ಡಿ 2)1-ಬಿ,2-ಎ,3-ಡಿ, 4-ಸಿ
2) 1-ಸಿ,2-ಡಿ,3-ಎ,4-ಬಿ 4)1-ಡಿ,2-ಎ,3-ಸಿ,4-ಬಿ

5. 13 ವರ್ಷದ ರವಿಯು ಹೋಟೇಲ್ ಒಂದರಲ್ಲಿ ದುಡಿಯುತ್ತಿದ್ದು, ಅದರ ಮಾಲಿಕ ಶಿಕ್ಷೆಗೆ ಒಳಪಡುತ್ತಾನೆ ಏಕೆಂದರೆ __________

1)ಬಾಲಕಾರ್ಮಿಕ ಕಾಯ್ದೆ 2)ಜೀತ ನಿರ್ಮೂಲನಾ ಕಾಯ್ದೆ
3)ಮಕ್ಕಳ ಸುರಕ್ಷತಾ ಕಾಯ್ದೆ 4) ಬಾಲಾಪರಾಧಿ ಕಾಯ್ದೆ

6. ಬಿಹಾರದ ಕಣ್ಣೀರಿನ ನದಿ__________

1) ಕೋಸಿ 2) ಮಹಾನದಿ 3)ದಾಮೋದರ 4) ನರ್ಮದಾ

7.ಕಾಫಿಯು ಈ ಬೇಸಾಯಕ್ಕೆ ಉತ್ತಮ ಉದಾಹರಣೆ___________

1)ಮಿಶ್ರ ಬೇಸಾಯ 2)ತೋಟಗಾರಿಕೆ 3)ಸಾಂದ್ರ ಬೇಸಾಯ 4)ಜೀವನಾಧಾರ

8) ಮಾನವ ಅಭಿವೃಧ್ಧಿಯ ಸೂಚಕದಲ್ಲಿ ಈ ಕೆಳಗಿನವು ಒಂದು ಅಲ್ಲ______.

1)ಜೀವಿತಾವಧಿ 2)ಜೀವನ ಮಟ್ಟ 3)ಶಿಕ್ಷಣ 4)ಸಾಮಾಜಿಕ ನ್ಯಾಯ

9.ಭಾರತದ ಬ್ಯಾಂಕ್ ಗಳ ಆರ್ಥಿಕ ವ್ಯವಹಾರಗಳು ಇದರ ನಿಯಂತ್ರಣದಲ್ಲಿ ಇದೆ______

1)ಕೈಗಾರಿಕಾಭಿವೃಧ್ಧಿ ಬ್ಯಾಂಕ್ 2)ರಿಸರ್ವ್ ಬ್ಯಾಂಕ್ 3)ಸ್ಟೇಟ್ ಬ್ಯಾಂಕ್ 4)ವಿಶ್ವ ಬ್ಯಾಂಕ್

10. ಇವರು ಬಿಳಿ ಕ್ರಾಂತಿಯ ಪಿತಾಮಹರು__________

1) ಧೀರುಭಾಯಿ ಅಂಬಾನಿ 2)ಜೋಸೆಫ್ ಕುರಿಯನ್ 3) ವರ್ಗೀಸ್ ಕುರಿಯನ್ 4) ನರೇಶ್ ಗೋಯೆಲ್

ಆ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 1*14=14

1. ಕಾಲಚಕ್ರವನ್ನು ವ್ಯಾಖ್ಯಾನಿಸಿರಿ.

2. 1961 ರಲ್ಲಿ ಭಾರತ ಸೈನ್ಯ ಗೋವಾದಲ್ಲಿ ಮಧ್ಯೆ ಪ್ರವೇಶಿಸಿತು ಏಕೆ?

3.ಎರಡನೇ ಮಹಾಯುಧ್ಧದಲ್ಲಿ ಜಪಾನ್ ಶರಣಾಗಲು ಈ ಅಂಶ ಕಾರಣವಾಯಿತು.

4. ಸ್ತ್ರೀ ಶಕ್ತಿ ಸ್ಥಾಪನೆಯ ಮುಖ್ಯ ಉದ್ದೇಶ ಏನಾಗಿರುತ್ತದೆ.?

5.ನೇಪಾಳದ ಅಭಿವೃಧ್ಧಿಯು ಭಾರತವನ್ನು ಅವಲಂಬಿಸಿದೆ.ಹೇಗೆ?

6.ಯುನಿಸೆಫ್ ವಿಶ್ವದ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಹಣವನ್ನು ಸಂಗ್ರಹಿಸುವ ಮಾರ್ಗ ಇದಾಗಿದೆ?

7.ಮೋಸದ ವಿವಾಹ ಮತ್ತು ಹೆಣ್ಣು ಶಿಶುಹತ್ಯೆ ಇಂದು ಹೆಚ್ಚಾಗಿದೆ . ನಿಮ್ಮ ದೃಷ್ಟಿಯಲ್ಲಿ ಇದಕ್ಕೆ ಕಾರಣವೇನು?

8.ಭಾರತವು ಯಾವ ಬಗೆಯ ವಾಯುಗುಣವನ್ನು ಹೊಂದಿದೆ?

9.ಭಾರತದಲ್ಲಿ ಅತೀ ಹೆಚ್ಚು ಭತ್ತ ಬೆಳೆಯುವ ರಾಜ್ಯ ಯಾವುದು?

10. ಯಾವ ಲೋಹವು ಇತ್ತೀಚಿನ ದಿನದಲ್ಲಿ ಅದ್ಭುತ ಲೋಹವೆಂದು ಕರೆಯಲ್ಪಡುತ್ತದೆ.?

11.ಮುಂಬೈಯನ್ನು ಮ್ಯಾಂಚೆಸ್ಟರ್ ಎಂದು ಏಕೆ ಕರೆಯುವರು?

12.ಅಭಿವೃಧ್ಧಿ ಪಥಕ್ಕೆ ಒಂದು ಉದಾಹರಣೆ ಕೊಡಿ.

13.ಅಭಿವೃದ್ಧಿ ಶೀಲ ರಾಷ್ಟ್ರದಲ್ಲಿ ಯಾವ ರೀತಿಯ ಆಯವ್ಯಯ ಪತ್ರ ಅವಶ್ಯಕ?

14.ಉದ್ಯಮಿ ಎಂಬ ಪದ ಯಾವ ಪದದಿಂದ ಬಂದಿದೆ.?

ಇ. ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ. 2*15=30

1.ಸಮುದ್ರಯಾಣಕ್ಕೆ ವೈಜ್ಞಾನಿಕ ಬೆಳವಣಿಗೆ ಕಾರಣ ಸಮರ್ಥಿಸಿರಿ.

2.ಎರಡನೇ ಮೈಸೂರು ಯುಧ್ಧಕ್ಕೆ ಕಾರಣಗಳೇನು?

3.ಸ್ಟಾಲಿನ್ ಆಳ್ವಿಕೆ ಹೇಗೆ ರಷ್ಯಾವನ್ನು ಅಭಿವೃಧ್ಧಿ ಪಥಕ್ಕೆ ಸಾಗಿಸಿತು?

4.ಸಾಕ್ಷರತೆಯನ್ನು ವೃಧ್ಧಿಸಲು ಕೈಗೊಂಡ ನಾಲ್ಕು ಕ್ರಮಗಳಾವುವು?

5.ಭಾರತವು ಮಾನವ ಹಕ್ಕುಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ. ಹೇಗೆ?

6.ಚಿಪ್ಕೋ ಚಳುವಳಿಯ ನೇತಾರ ಯಾರು? ಅದು ಎಲ್ಲಿ ನಡೆಯಿತು?

7.ಪಶ್ಚಿಮ ಮತ್ತು ಪೂರ್ವ ಕರಾವಳಿಯ ವ್ಯತ್ಯಾಸ ತಿಳಿಸಿ.

8.ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು?

9.ಅರಣ್ಯ ಸಂರಕ್ಷಣೆಯ ನಾಲ್ಕು ವಿಧಾನವನ್ನು ತಿಳಿಸಿ.

10.' ಜಿ.ಪಿ.ಎಸ್ ವ್ಯವಸ್ಥೆ ಒಂದು ಮಾರ್ಗಸೂಚಿ ಎಂದು ಸಮರ್ಥಿಸಿರಿ"

11.ಚಂಡಮಾರುತಗಳ ಪರಿಣಾಮಗಳನ್ನು ತಿಳಿಸಿ.

12.ಜನಸಂಖ್ಯೆ ನಿಯಂತ್ರಣದಲ್ಲಿ ಭಾರತವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಇದನ್ನು ಸಮರ್ಥಿಸಿರಿ.

13.ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳನ್ನು ತಿಳಿಸಿ.

14.ಪ್ರಾರ್ಥನಾ ಸಮಾಜದ ಉದ್ದೇಶಗಳೇನು?

15.ಅಂತರಾಷ್ಟ್ರೀಯ ವ್ಯಾಪಾರ ವ್ಯವಹಾರದಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಪಾತ್ರ ಪ್ರಮುಖವಾದುದು. ಸಮರ್ಥಿಸಿರಿ.

ಈ. ಐದು ಆರು ವಾಕ್ಯದಲ್ಲಿ ಉತ್ತರಿಸಿರಿ. 6*3=18

1.ದತ್ತು ಮಕ್ಕಳಿಗೆ ಹಕ್ಕಿಲ್ಲ ಈ ನೀತಿಯು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣ. ಈ ವಾಕ್ಯವನ್ನು ನಿರೂಪಿಸಿ.
ಅಥವಾ

ಇಂಗ್ಲೆಂಡಿನ ಕೈಗಾರಿಕೆಗಳು ದೇಶೀ ಕೈಗಾರಿಕೆಗಳ ಮೇಲೆ ಪ್ರಬಾವ ಬೀರಿತು. ಸಮರ್ಥಿಸಿರಿ

2.ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತಿ ಅಗತ್ಯ. ವಿಶ್ಲೇಶಿಸಿ.

ಅಥವಾ

ಭಾರತ ಮತ್ತು ಪಾಕಿಸ್ತಾನ ಸಂಬಂದ ಉತ್ತಮವಾಗಿಲ್ಲ ಏಕೆ?

3.ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ವ್ಯತ್ಯಾಸ ತಿಳಿಸಿ

ಅಥವಾ

ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮವನ್ನು ತಿಳಿಸಿ.

4. ಭಾರತದಲ್ಲಿ ರಸ್ತೆ ಸಾರಿಗೆ ಪ್ರಾಮುಖ್ಯತೆ ತಿಳಿಸಿ.

ಅಥವ

ಕೈಗಾರಿಕಾ ವಲಯವನ್ನು ಪಟ್ಟಿ ಮಾಡಿರಿ

5.ಭಾರತದ ಗ್ರಾಮೀಣ ಪ್ರದೇಶಗಳು ಹಿಂದುಳಿದಿರಲು ಕಾರಣವೇನು?

ಅಥವಾ

ಕೇಂದ್ರುಸರ್ಕಾರದ ಯೋಜನಾ ವೆಚ್ಚವನ್ನು ಪಟ್ಟಿ ಮಾಡಿರಿ

6.ಬ್ಯಾಂಕ್ ಖಾತೆ ತೆರೆಯುದರಿಂದ ಆಗುವ ಪ್ರಯೂಜನವೇನು?

ಅಥವಾ

ವಿಮಾ ಪಾಲಿಸಿಯು ಪಡೆಯುವಾಗ ಅನುಸರಿಸಬೇಕಾದ ವಿಧಾನಗಳಾವುವು?

ಉ. ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿರಿ 4*1=4

1.ಗಾಂಧೀಜಿಯವರು ಆರಂಭಿಸಿದ ಅಸಹಕಾರ ಚಳುವಳಿಯು ಸ್ವಾತಂತ್ರ್ಯ ಚಳುವಳಿಯನ್ನು ಹೇಗೆ ತೀವ್ರಗೊಳಿಸಿತು.ವಿವರಿಸಿರಿ.

ಊ. ಭಾರತದ ನಕಾಶೆಯನ್ನು ಬರೆದು ಈ ಕೆಳಗಿನ ಅಂಶಗಳನ್ನು ಗುರುತಿಸಿ.4*1=4

ಬಾಂಬೆ ಹೈ,   ಮಹಾನದಿ,   ರೋಯ್ಲಿ